ಕರ್ನಾಟಕ ಸರ್ಕಾರ<br>(ಸಾರ್ವಜನಿಕ ಶಿಕ್ಷಣ ಇಲಾಖೆ)

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ,<br>ಹೂವಿನಹಡಗಲಿ, ಜಿ: ಬಳ್ಳಾರಿ.<br>ದಿನಾಂಕ: 05-05-2009.

ನಮೂನೆ - 2.<br>(ನಿಯಮ 3ರ ಉಪ ನಿಯಮ 5 (ಬಿ))

ಪ್ರಮಾಣ ಪತ್ರ ಸಂಖ್ಯೆ:- 31. 2009.

---ಶ್ರೀ ಮರುಳ ಸಿದ್ಧ ಪದವಿ (ಪಿಯು) ಕಾಲೇಜ್---

---ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ---

ಇವರು ಗಾರ್ನಿಂಗ ಕೌನ್ಸಿಲ್ಸ ಕರ್ನಾಟಕ ಶಿಕ್ಷಣ ಕಾಯಿದೆ, 1983 (ಕರ್ನಾಟಕ ಅಧಿನಿಯಮ 1 ಆಫ 1995) ನ ಸೆಕ್ಷನ 31 ರಂತೆ --2009-- ನೇ --ಮೇ-- ತಿಂಗಳ ದಿ--05-05-2009-- ರ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1) ಕ್ರಮ ಸಂಖ್ಯೆ ::
2) ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ. :: ಶ್ರೀ ಮರುಳ ಸಿದ್ಧ ಪದವಿ ಕಾಲೇಜ (ಪಿಯುಸಿ) ಇಟಗಿ ಹೂವಿನಹಡಗಲಿ
3) ಅನುಮತಿ ನೀಡಿದ ತರಗತಿಗಳು :: ಎಲ್.ಕೆ.ಜಿ ಮತ್ತು ಯು.ಕೆ.ಜಿ
4) ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ :: 2009-10ನೇ ಸಾಲಿಗೆ
5) ಅನುಮತಿ ನೀಡಿದ ಮಾಧ್ಯಮ :: ಕನ್ನಡ
6) ಶುಲ್ಕ ಪಾವತಿ ಮಾಡಿರುವುದು :: ರೂ.5000/- ಬ್ಯಾಂಕ ಆಫ್ ಬರೋಡ BEO ಡಿಡಿ ನಂ 24700[illegible] ಜಮಾ ಮಾಡಿದೆ

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 31 ಪುಟ ಸಂಖ್ಯೆ:- 68-69 ಮತ್ತು ವಾಲ್ಯೂಂ ಸಂಖ್ಯೆ: 01 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ.

1) ನೋಂದಾವಣಿಯು ನಿಯಮ 3 ರ (4) ಮತ್ತು (5) ಕ್ಕೆ ಒಳಪಡುತ್ತದೆ.
2) ಗಾರ್ನಿಂಗ ಕೌನ್ಸಿಲ್‌ರವರು ನಿಯಮ (4), 4 ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
3) ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣಗಳು, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಡುತ್ತದೆ.

4. ಈ ಶಿಕ್ಷಣ ಸಂಸ್ಥೆಗೆ ———— ಮಾಧ್ಯಮ ಪ್ರಾಥಮಿಕ ಶಾಲೆಯನ್ನು ತೆರೆಯಲು ನೋಂದಾಯಿಸುವ ವಿಚಾರವನ್ನು ಸರ್ಕಾರಿ ಆದೇಶ ಸಂಖ್ಯೆ: ಇಡಿ:14:ಎಸ್ ಇ:ಎಸ್. 98: ದಿನಾಂಕ: 17003-1999 ರನ್ವಯ ಪರಿಶೀಲಿಸಲಾಗಿದೆ.

———————— ವರದಿಯನ್ವಯ ಈ ಸಂಸ್ಥೆಯು ಶಾಲೆಯನ್ನು ತೆರೆಯಲು ಉದ್ದೇಶಿಸಿರುವ ಸ್ಥಳದಲ್ಲಿ 2ಕಿಮೀ ವಿಸ್ತೀರ್ಣದೊಳಗಿನ ಪ್ರದೇಶದಲ್ಲಿ ——— ಸರ್ಕಾರಿ ಪ್ರಾಥಮಿಕ ಶಾಲೆಗಳು ಈಗ ಅಸ್ತಿತ್ವದಲ್ಲಿರುತ್ತವೆ. ಹಾಗೂ ಈ ಶಾಲೆಗಳು ಸದರಿ ಪ್ರದೇಶದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಿರುವುದನ್ನು ಮನಗಾಣಲಾಗಿದೆ. ಆದಾಗ್ಯೂ ಸರ್ವೋಚ್ಚನ್ಯಾಯಾಲಯವು ಉನ್ನಿಕೃಷ್ಣನ್ ಪ್ರಕರಣದಲ್ಲಿ 14 ವರ್ಷಗಳ ವಯೋಮಿತಿಯೊಳಗಿನ ಮಕ್ಕಳಿಗೆ ಉಚಿತ ಶಿಕ್ಷಣ ಪ್ರಕರಣದಲ್ಲಿ ಸಂವಿಧಾನಾತ್ಮಕ ಹಕ್ಕನ್ನು ಎತ್ತಿಹಿಡಿದು ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಹ ಒದಗಿಸುವುದು ಹಾಗೂ ರಾಜ್ಯ ಸರ್ಕಾರದ ನಡೆಸುವ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಇಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರೈಸುತ್ತವೆಂಬ ಅಂಶವನ್ನು ಎತ್ತಿ ಹಿಡಿದಿದೆ. ಈ ಸ್ಥಳದಲ್ಲಿ ಮತ್ತೊಂದು ಪ್ರಾಥಮಿಕ ಶಾಲೆಯ ಅಗತ್ಯತೆಯು ಇಲ್ಲದಿದ್ದರೂ ಸರ್ಕಾರಿ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಲು ಮತ್ತು ಪೋಷಕರಿಗೆ ಮಕ್ಕಳಿಗೆ ಇಚ್ಛೆಯ ಆಯ್ಕೆ ಸ್ವಾತಂತ್ರ್ಯ ನೀಡುವ ಉದ್ದೇಶದಿಂದಲೂ ಹಾಗೂ ಸದರಿ ಶಿಕ್ಷಣ ಸಂಸ್ಥೆಯು ಸ್ವಯಂ ಪ್ರೇರಣೆಯಿಂದ ಸದರಿ ಸ್ಥಳದಲ್ಲಿ ಮತ್ತೊಂದು ಶಾಲೆಯನ್ನು ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ತೆರೆಯಲು ಇಚ್ಛಿಸಿರುವುದರಿಂದ ಸದರಿ ಶಾಲೆಯನ್ನು ಮೇಲ್ದರ್ಜೆಗೆ ನೋಂದಾಯಿಸಲಾಗಿದೆ.

5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೇ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳಗಳಲ್ಲಿ ಮಾತ್ರ ತೆರೆಯತಕ್ಕದ್ದು, ಹಾಗೂ ಯಾವುದೇ ಕಾರಣಕ್ಕೂ ಸಹ ಬದಲಾವಣೆ ಮಾಡಲು ಅವಕಾಶ ವಿರುವುದಿಲ್ಲ.

7) ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮಾತ್ರ ಅದೇ ಹೆಸರಿನಲ್ಲಿ ಶಾಲೆಯನ್ನು ಸಹ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

8. ಸರ್ಕಾರಿ ಆದೇಶ ಸಂಖ್ಯೆ: ಇಡಿ:28 ಪಿ ಬಿ ಸಿ 94, ದಿನಾಂಕ: 26-4-93 ರಂತೆ 1 ರಿಂದ 4 ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷೆ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪರಿಪಾಲಿಸುವ ಶಾಲೆಗಳಿಗೆ 5ನೇ ತರಗತಿಯಿಂದ ಆಂಗ್ಲ ಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿ ನೋಂದಾಯಿಸಲಾಗಿದೆ. ಭಾಷಾ ನೀತಿಯ ಷರತ್ತಿಗೆ ಒಳಪಟ್ಟು ನೋಂದಾವಣೆಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸುವುದು ಸರ್ಕಾರದ ಇಲಾಖೆಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಾನುಸಾರ ಸದರಿ ಶಾಲೆಯ ನೋಂದಣಿ ರದ್ದು ಪಡಿಸಲಾಗುವುದು.

9. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

10. ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ 1 ಆಫ್ 1995) ಪರಿಧಿಯಲ್ಲಿ ಬರುವ ಕಾಯಿದೆಗಳನ್ನು ಹಾಗೂ ರಚಿಸಲಾಗಿ ಮತ್ತು ಆಗಿಂದಾಗ್ಗೆ ರಚಿಸಲಾಗುವ ನಿಯಮಗಳ ಸಂಬಂಧದಲ್ಲಿ ಮತ್ತು ಪ್ರಾಧಿಕಾರ ನೀಡುವ ಎಲ್ಲಾ ಸೂಚನೆಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

11. ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೋಂದಣಿಯಾಗಿರುವ ಶಾಲೆಗಳೆಲ್ಲವೂ ಸರ್ಕಾರಿ ಅಧಿಸೂಚನೆ ಸಂಖ್ಯೆ:ಇಡಿ:175 ಪಿ ಎಂ ಸಿ 95 ದಿನಾಂಕ:7-9-98 ಮತ್ತು ಇಡಿ 195 ಸಿ ಎಂ ದಿನಾಂಕ: 29-12-1998 ರಂತೆ ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.

12. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ನಿಯಮ 1978ರ ನಿಯಮವನ್ನು ತಪ್ಪದೇ ಪಾಲಿಸತಕ್ಕದ್ದು.

13. ಶಾಲೆಯು ಪ್ರಾರಂಭಿಸಿದ 2 ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಜಿಲ್ಲಾ ಉಪನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ನಂತರ ಪ್ರತಿ 3 ವರ್ಷಗಳಿಗೊಮ್ಮೆ ಮಾನ್ಯತೆಯನ್ನು ನವೀಕರಿಸಿಕೊಳ್ಳತಕ್ಕದ್ದು.

14. ಅನುಮತಿ ನೀಡಿದ ಪ್ರತಿಯೊಂದು ಇಲಾಖೆಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪರಿಶೀಲಿಸತಕ್ಕದ್ದು.

15. ತರಬೇತಿ ಹೊಂದಿದ ಹಾಗೂ ಇಲಾಖಾ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

16. ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದದ ರಲ್ಲಿ ಉಪ ಬಂಧ 36 ರಿಂದ 3 ರಂತೆ ನೋಂದಾಯಿಸಿ ಮಾಡಿದ ಎಲ್ಲಾ ಶಾಲೆಗಳ ರಿಕಗ್ನಿಷನ್ ಹಾಗೂ ಪ್ರಾವಿಜನಲ್ ರಿಕಗ್ನಿಷನ್ ವ್ಯಾಪ್ತಿಗೆ ಬರುವುದು.

17. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆ ನಿಯಮ ಬದ್ಧತಾ ಘೋಷಣೆಯನ್ನು ಜಿಲ್ಲಾ ಉಪನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಸಹಿಯನ್ನು ಈ ಕಛೇರಿಯಲ್ಲಿ ಇಡತಕ್ಕದ್ದು.

18. ಕರ್ನಾಟಕ ಶಿಕ್ಷಣ ಮಸೂದೆ ನಿಯಮಾವಳಿಗಳ ಪ್ರಕಾರ ತಮಗೆ ಬೇಕಾದ ಪಾಠೋಪಕರಣ ಪೀಠೋಪಕರಣ, ಗ್ರಂಥಾಲಯದ ಪುಸ್ತಕಗಳನ್ನು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಅಗತ್ಯ ಸೌಲಭ್ಯಗಳನ್ನು 1 ವರ್ಷದೊಳಗೆ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ನೋಂದಾವಣೆಯನ್ನು ರದ್ದು ಗೊಳಿಸಲಾಗುವುದು.

19. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆಯು ಮಂಜೂರಾತಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ದಿನಾಂಕದೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಿಳಿಸತಕ್ಕದ್ದು. ಒಂದು ವೇಳೆ ಶಾಲೆಯು ತೆರೆಯದೇ ಇದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ಅನೂರ್ಜಿತಗೊಳ್ಳುವುದು.

~~20. ಈ ವರ್ಷ 2002-03ನೇ ಸಾಲಿಗೆ ಒಂದನೇ ತರಗತಿಯನ್ನು ಮಾತ್ರ ಪ್ರಾರಂಭಿಸುವುದು. 2003-04ನೇ ಸಾಲಿಗೆ ಎರಡನೇ ತರಗತಿಯಂತೆ ಹೀಗೆ ಸ್ವಾಭಾವಿಕ ಬೆಳವಣಿಗೆಯಲ್ಲಿ ಪ್ರತಿ ವರ್ಷ ಒಂದೊಂದೇ ತರಗತಿಯಂತೆ ಒಂದರಿಂದ ನಾಲ್ಕನೇ ತರಗತಿವರೆಗೆ ಮಾತ್ರ, ತದನಂತರ ಪ್ರಾಧಿಕಾರದಿಂದ ಮೇಲ್ದರ್ಜೆಗೇರಿಸಿಕೊಳ್ಳತಕ್ಕದ್ದು.~~

20. ಈ ವರ್ಷ 2009-10ನೇ ಸಾಲಿನ [illegible]
[illegible]

5/5/09

ಕೆ. ರಾಮನಗೌಡ
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಹೂವಿನಹಡಗಲಿ ಬಳ್ಳಾರಿ ಜಿ||

ಗೆ.
[illegible]

ಕರ್ನಾಟಕ ಸರಕಾರ

(ಜಿಲ್ಲಾ ಪಂಚಾಯತ್)

ಉಪನಿರ್ದೇಶಕರು (ಆಡಳಿತ)ರವರ ಕಚೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ ಜಿಲ್ಲೆ.

ಸಂಖ್ಯೆ:ಜಿ:ಖಾ.ಪ್ರಾ.ಶಾ:ಕನ್ನಡಮಾಧ್ಯಮ:ಪ್ರಾರಂಭ:ಪರ:13/10-11 ದಿನಾಂಕ: 12-04-2010

ನಮೂನೆ-2

(ನಿಯಮ 7 ಉಪನಿಯಮ 5ಬಿ)

ಪ್ರಮಾಣ ಪತ್ರ ಸಂಖ್ಯೆ: 25/08-09

ಕಾರ್ಮೆಲ್ ಜ್ಞಾನ ಎಜ್ಯುಕೇಶನ್ ಟ್ರಸ್ಟ್, 8ನೇ ವಾರ್ಡ್ ಹೂವಿನಹಡಗಲಿ ತಾ: ಬಳ್ಳಾರಿ ಜಿಲ್ಲೆ

ಇವರ ಗವರ್ನಿಂಗ್ ಕೌನ್ಸಿಲ್ ಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಯಾಕ್ಟ 1995 ಸೆಕ್ಷನ್ 31 ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಇ2.44 ಪಿಜಿಸಿ 2002 ದಿನಾಂಕ 11-6-2002ರ ಪ್ರಕಾರ ಈ ದಿನ 04-07-2009 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 12 ಪುಟ ಸಂಖ್ಯೆ 37 ವಾಲ್ಯೂಂ ಸಂಖ್ಯೆ:01 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣಿಕರಿಸಲಾಗಿದೆ.

| | |
|---|---|
| 1)ಕ್ರಮ ಸಂಖ್ಯೆ : | 12/10-11 |
| 2)ಶಾಲೆಯ ಹೆಸರು ಮತ್ತು ವಿಳಾಸ : | ಮೌಂಟ್ ಕಾರ್ಮೆಲ್ ಸ್ಕೂಲ್ ಕಾರ್ಮೆಲ್ ಜ್ಞಾನ ಸದನ (ಚಾಪೆಲ್) 8ನೇ ವಾರ್ಡ್ ಹೂವಿನಹಡಗಲಿ ತಾ: ಬಳ್ಳಾರಿ ಜಿಲ್ಲೆ |
| 3)ಅನುಮತಿ ನೀಡಿದ ತರಗತಿ : | 1ನೇ ತರಗತಿ, 2ನೇ ತರಗತಿ, 3ನೇ ತರಗತಿ, 4ನೇ ತರಗತಿ, 5ನೇ ತರಗತಿ |
| 4)ಪ್ರಾರಂಭಿಸ ಬೇಕಾದ ಶೈಕ್ಷಣಿಕ ವರ್ಷ : | 2010-11 2011-12, 2012-13, 2013-14, 2014-15 |
| 5)ಅನುಮತಿ ನೀಡಿದ ಮಾಧ್ಯಮ : | ಕನ್ನಡ |
| 6)ಶುಲ್ಕ ಪಾವತಿ ಮಾಡಿರುವುದು | Rs= 5000=00 (ಐದುಸಾವಿರ ಮಾತ್ರ) |

ಈ ನೊಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ / ನೊಂದಣಿ / ಅನುಮತಿಯನ್ನು ರದ್ದು ಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

೧) ಈ ನೊಂದಾವಣೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು / ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ / ವರ್ಗೀಕರಣ / ನಿಯಮ-1997 ನಿಯಮ-3/5//ಡಿ/ ನಲ್ಲೀ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.

೨) ಕರ್ನಾಟಕ ಶಿಕ್ಷಣ ಸಂಸ್ಥೆಗಳು / ವರ್ಗೀಕರಣ ನಿಯಂತ್ರಣ ಮತ್ತು ಪಠ್ಯ ವಸ್ತು ನಿಗದಿಕರಣ ಇತ್ಯಾದಿ / ನಿಯಮಾವಳಿಗಳು 1995ರ ನಿಯಮ 4 5 6 ಮತ್ತು 9 ರನ್ವಯ ಸುರಕ್ಷತಾ ಕ್ರಮವಾಗಿ ಶಾಲಾ ಕಟ್ಟಡವು - ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು - ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮ ಗಳನ್ನು ತೆಗೆದುಕೊಳ್ಳಬೇಕು

೩) ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿಯಿಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

೪) ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ _ 41/5/ ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು. ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

MOUNT CARMEL SCHOOL
PRINCIPAL
HUVINAHADAGALI

೫) ಯಾವ ಆಡಳಿತಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೇ ಹಸ್ತಾಂತರಿಸತಕ್ಕದ್ದಲ್ಲ.

೬) ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.ಕರ್ನಾಟಕ ಶಿಕ್ಷಣ ಮಸೂದೆ 1983 ರ ಯಾಕ್ಟ್ ಸಂಖ್ಯೆ 1:95/ ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

೭) ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ :ಇಡಿ:175:ಪಿಎಂಸಿ:95 ದಿನಾಂಕ 07-09-08 ಮತ್ತು ದಿ:29-12-98 ರಪ್ರಕಾರ ಶಾಶ್ವತ ಅನುದಾನ ರಹಿತವಾಗಿ ರುತ್ತದೆ(Permanently without - aid)

೮) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಸ್ತು ಮತ್ತು ನಿಯಂತ್ರಣ ಮತ್ತು ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧರಾಗಿರತಕ್ಕದ್ದು.

೯) ಕರ್ನಾಟಕ ಶಿಕ್ಷಣ ಸಂಸ್ಥೆಗಳು / ವರ್ಗೀಕರಣ ನಿಯಂತ್ರಣ ಮತ್ತು ಪಠ್ಯ ವಸ್ತು ನಿಗಧಿಕರಣ ಇತ್ಯಾದಿ / ನಿಯಮಾವಳಿಗಳು 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಭೋಧಿಸತಕ್ಕದ್ದು ಹಾಗು ವಿಧ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮ ವಹಿಸತಕ್ಕದ್ದು.

೧೦) ಕರ್ನಾಟಕ ಶಿಕ್ಷಣ ಸಂಸ್ಥೆಗಳು / ವರ್ಗೀಕರಣ ನಿಯಂತ್ರಣ ಮತ್ತು ಪಠ್ಯ ವಸ್ತು ನಿಗಧಿಕರಣ ಇತ್ಯಾದಿ / ನಿಯಮಾವಳಿಗಳು 1995. ದಿನಾಂಕ 4-10-96 ರ ನಿಯಮ 10 ರಂತೆ ಟರ್ಮ್ ಶುಲ್ಕ ಬೋಧನಾ ಶುಲ್ಕ ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10/04 ರಂತೆ ಶಾಲೆಯಲ್ಲಿ ವಿದ್ಯಾರ್ಥಿ / ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಬ್ರೋಚರ್ ಅನ್ನು ಶಾಲೆಯ ಸೂಚನಾಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ / ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

೧೧) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ.39.ವಿವಿಧ-990. ದ.14/3/2000ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ / ರೆಗ್ಯುಲೇಷನ್ ಆಫ್ ಸರ್ ಟನ್ ಪೀಸ್ ಅಂಡ್ ಡೊನೇಶನ್ಸ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಗಯನ್ನು ವಸೂಲು ಮಾಡುವಂತಿಲ್ಲ.

೧೨) ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1 ಆಫ್ 1995) ರ ಪ್ರಕಾರ ಸೆಕ್ಷನ್ 36 ರಿಂದ 39ರ ರೀತ್ಯಾ ಹಾಗೂ ಇಡಿ 131 ವಿವಿಧ 98 ಬೆಂಗಳೂರು ದಿ.4/11/99 ರಂತೆ ಮಾನ್ಯತೆ ವರ್ಗೀಕರಣ ಹೊಂದಲು ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 137 ವಿವಿಧ 98 ಬೆಂಗಳೂರು ದಿ.19/5/99ರ ಪ್ರಕಾರ ಸೆಕ್ಷನ್ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗಧಿತ ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

೧೩) ಸರ್ಕಾರಿ ಆದೇಶ ಸಂಖ್ಯೆ ಇಡಿ 28 ಪಿ ಜಿ ಸಿ 94 ದಿ. 29.4.94 ರಂತೆ 1 ರಿಂದ 5ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃ ಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸಬೇಕು.

MOUNT CARMEL SCHOOL
PRINCIPAL
HUVINAHADAGALI

14. ಸರ್ಕಾರದ ಅಧಿಸೂಚನೆ ಇಡಿ.52.ವಿವಿಧ 99. ದಿ.2/2/2000ರ ನಿಯಮದಂತೆ ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.

15.ತರಬೇತಿ ಹೊಂದಿದ ಹಾಗೂ ಇಲಾಕೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

16. ಕರ್ನಾಟಕ ಶಿಕ್ಷಣ ಮಸುದೆಯ ನಿಯಮಗಳಂತೆ ಶಾಲೆಗೆ ಬೇಕಾದ ಆಟದ ಮೈದಾನ , ಶಾಲಾ ಕಟ್ಟಡಗಳನ್ನು ಪೀಠೋಪಕರಣ, ಪಾಠೋಪಕರಣ ಗ್ರಂಥಾಲಯ, ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು. ಇಲ್ಲವಾದಲ್ಲ ಮಾನ್ಯತೆಯಸ್ಸು ರದ್ದು ಪಡಿಸಲಾಗುವುದು.

17. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

18. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಸಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆಧೇಶ ತನ್ನಿಂದ ತಾನೇ ರದ್ದಾಗುವುದು.

19.ಸರ್ಕಾರಧ ಸುತ್ತೋಲೆ ಸಂ:ಸಂಖ್ಯೆ: ಇಡಿ.27. ಎಸ್.ಇ.ಪಿ. 03 ದಿ.13/2/2006ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಶಾಲೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳ ಸೇವಾ ಮುಸ್ತಕವನ್ನು ತೆರದು ಅದರಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.

20. ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.

21. ನೇಮಕಗೊಂಡ ಶಿಕ್ಷಕರಿಗೆ ಸೇವಾಬಧ್ರತೆ ಒದಗಿಸುವುದು. ಬ್ಯಾಂಕ್ ಮೂಲಕ ವೇತನ ನೀಡುವುದು , ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

22.ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ಧಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೊಂದಣಿಯನ್ನು ರದ್ದು ಪಡಿಸಲಾಗುವುದು.

ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ
ಕಾರ್ಯ... ಶಿಕ್ಷಣ ಇಲಾಖೆ, ಬಳ್ಳಾರಿ

ಸ್ಥಳ: ಬಳ್ಳಾರಿ
ದಿನಾಂಕ: 12-04-2010

ಇವರಿಗೆ,
ಕಾರ್ಯದರ್ಶಿಗಳು, ಕಾರ್ಮೆಲ್ ಜ್ಞಾನ ವಿದ್ಯಾಸ್ಥಾನ ಟ್ರಸ್ಟ್, 8 ನೇ ವಾರ್ಡ್, ಹೂವಿನಹಡಗಲಿ ತಾ॥ ಬಳ್ಳಾರಿ ಜಿಲ್ಲೆ

ಪ್ರತಿಯನ್ನು,
1)ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೂವಿನ . ಹಡಗಲಿ
2)ಮುಖ್ಯಗುರುಗಳು, ಮೌಂಟ್ ಕಾರ್ಮೆಲ್ ಸ್ಕೂಲ್, ಕಾರ್ಮೆಲ್ ಕಾನ್ವೆಂಟ್ (ಬಾಲಕ) 8 ನೇ ವಾರ್ಡ್ ಹೂವಿನ ಹಡಗಲಿ ತಾ॥ ಬಳ್ಳಾರಿ ಜಿಲ್ಲೆ

MOUNT CARMEL SCHOOL
PRINCIPAL
HUVINAHADAGALI

ಕರ್ನಾಟಕ ಸರಕಾರ

ಉಪ ನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ,ಬಳ್ಳಾರಿ

E-Mail Id. : ddpiblry@gmail.com

Phone No. : 08392-268239

ಸಂಖ್ಯೆ: ಜಿ3/ಖಾಪ್ರಾಶಾ/ಕನ್ನಡ ಮಾಧ್ಯಮ/6-8 ನೇ /ಅನುಮತಿ/84/2014-15 ದಿನಾಂಕ: 13-3-2015

ನಮೂನೆ-2

(ನಿಯಮ 7 ಉಪನಿಯಮ 5 ಬಿ)

ಪ್ರಮಾಣ ಪತ್ರ ಸಂಖ್ಯೆ 23/08-09

**ಅಧ್ಯಕ್ಷರು/ಸಂಚಾಲಕರು,ಕಾರ್ಮೆಲ್ ಜ್ಞಾನ ಎಜ್ಯುಕೇಶನ್ ಟ್ರಸ್ಟ್** [ರಿ] **ತಾ: ಹಡಗಲಿ ಜಿ : ಬಳ್ಳಾರಿ** ಇವರ ಗವರ್ನಿಂಗ್ ಕೌನ್ಸಿಲ್ ಇವರಿಂದ ಸಲ್ಲಿಸಿದ ಪ್ರಸ್ತಾವನೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ 1-1995 ಸೆಕ್ಷನ್ 31 ರಂತೆ ಮತ್ತು Karanataka Education instution [classification and Registration]Rules 1997 ರ ನಿಯಮ 3 ಮತ್ತು 4 ರಂತೆ ಈ ದಿನಾಂಕ 15-3-2015 ರಂದು ಈ ಕೆಳಗೆ ನಮೂದಿಸಿದ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣಿಕರಿಸಲಾಗಿದೆ.

ಸರ್ಕಾರದ ಪ.ಸಂ ಇ.ಡಿ.91 ಮಾಹಿತಿ 2012 ದಿನಾಂಕ :- 15-11-2012 ರ ಲ್ಲಿ ಕರ್ನಾಟಕ ಮಕ್ಕಳ ಉಚಿತ ಶಿಕ್ಷಣ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ರ ಅಡಿಯಲ್ಲಿ 2 ಎಫ್. ನಿಯಮದಂತೆ ಪ್ರಾಥಮಿಕ ಶಿಕ್ಷಣ ಚಕ್ರವು 1 ರಿಂದ 8 ನೇ ತರಗತಿವರೆಗೆ ಇರುತ್ತದೆ.

| | | |
|---|---|---|
| 1 | ಕ್ರಮ ಸಂಖ್ಯೆ | 01/2014-15 |
| 2 | ಶಾಲೆಯ ಹೆಸರು ಮತ್ತು ವಿಳಾಸ | ಮೌಂಟ್ ಕಾರ್ಮೆಲ್ ಹಿರಿಯ ಪ್ರಾಥಮಿಕ ಶಾಲೆ ತಾ: ಹಡಗಲಿ ಜಿ: ಬಳ್ಳಾರಿ. |
| 3 | ಅನುಮತಿ ನೀಡಿದ ತರಗತಿ | 6 ರಿಂದ 8 ನೇ ತರಗತಿಗೆ |
| 4 | ಅನುಮತಿ ನೀಡಿದ ವರ್ಷ | 2015-16<br>2015-16 ಕ್ಕೆ 6 ನೇ ತರಗತಿ<br>2016-17 ಕ್ಕೆ 7 ನೇ ತರಗತಿ<br>2017-18 ಕ್ಕೆ 8 ನೇ ತರಗತಿ |
| 5 | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮದಲ್ಲಿ |
| 6 | ಶುಲ್ಕ ಪಾವತಿ | ರೂ: 50,000=00 ನೋಂದಣಿ ಶುಲ್ಕ<br>ರೂ:-20,000=00 ಸಂಸ್ಕರಣ ಶುಲ್ಕ ಎಸ್‌ಬಿ.ಎಂ. ಹಡಗಲಿ ಬಳ್ಳಾರಿ |
| 7 | ಸಕಾಲ ಸೇವೆಯ ಜಿ.ಎಸ್.ಸಿ. ಸಂಖ್ಯೆ ಹಾಗೂ ದಿನಾಂಕ:- | ED0990000169039 ದಿನಾಂಕ :- 29-11-2014 |

ಸದರಿ ಶಿಕ್ಷಣ ಸಂಸ್ಥೆಯನ್ನು ಈ ಕಛೇರಿಯಲ್ಲಿನ ಶಿಕ್ಷಣ ಸಂಸ್ಥೆಗಳ ನೋಂದಣಿ ವಹಿಯಲ್ಲಿ ವ್ಯಾಲೂಂ ಸಂಖ್ಯೆ :-03ರಲ್ಲಿ ಪುಟ ಸಂಖ್ಯೆ :-01 ಕ್ರಮ ಸಂಖ್ಯೆ :- ರಲ್ಲಿ ನೋಂದಾಯಿಸಲಾಗಿದೆ. ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಯವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ ನೋದಣಿಯನ್ನು ರದ್ದು ಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. Karanataka Education instution [classification and Registration]Rules 1997 ರ ನಿಯಮ 3 ಮತ್ತು 4 ಹಾಗೂ 5 ಕ್ಕೆ ಒಳಪಟ್ಟಿರುತ್ತದೆ.

1. ಗವರ್ನಿಂಗ್ ಕೌನ್ಸಿಲ್ ಇವರು Karanataka Education instution [classification and Registration]Rules 1997 ರ ನಿಯಮ 4 [4] ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
2. ಕರ್ನಾಟಕ ಶಿಕ್ಷಣ ಕಾಯ್ದೆ 1983 ನಿಯಮ 42 ರ ಪ್ರಕಾರ ಈ ಸಾಲಿಗೆ ವ್ಯವಸ್ಥಾಪಕ ಸಮಿತಿಯನ್ನು ರಚಿಸತಕ್ಕದ್ದು. ಇದರಡಿಯಲ್ಲಿಯ ನಿಯಮಗಳ ಪ್ರಕಾರ ಶಾಲೆ ನಡೆಸತಕ್ಕದ್ದು.
3. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿಯಿಲ್ಲದೇ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು . ಇಲಾಖಾ ಪೂರ್ವಾನುಮತಿಯಿಲ್ಲದೇ ಶಾಲೆಯನ್ನು ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಭಂದಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿದ್ದಾಂಗೆ ಹೊರಡಿಸುವ ಎಲ್ಲಾ ಸರ್ಕಾರಿ ಅದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಕಾಯ್ದೆ 1983 ನಿಯಮದಡಿ ಬರುವ ಕಾಯ್ದೆಗಳನ್ನು ಮತ್ತು ಇದರಡಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಣಿಯಂತೆ ಸರ್ಕಾರಿ ಅಧೀಸೂಚನೆ ಸಂಖ್ಯೆ ಇಡಿ 175 ಪಿ.ಎಂ.ಸಿ.95 ದಿನಾಂಕ :- 07/09/1998 ಮತ್ತು 29/12/1998 ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿ ಆಡಳಿತ ಮಂಡಳಿಯು ಸರಕಾರದ ಅನುದಾನವನ್ನು ಬಯಸುವುದಿಲ್ಲವೆಂದು ರೂ :- 20=00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು.
8. ಇಲಾಖೆ ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯ-ಪುಸ್ತಕ, ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೇ ಅಳವಡಿಸತಕ್ಕದ್ದು.
9. ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 [ಅಕ್ಟ ಆಫ್ 1995] ರ ಪ್ರಕಾರ ಸೆಕ್ಷನ್ 36 ರಿಂದ 39 ರ ರೀತ್ಯ ಹಾಗೂ ಇ.ಡಿ. 131 ವಿವಿಧ 98 ಬೆಂಗಳೂರು ದಿನಾಂಕ :- 4-11-1999 ರಂತೆ ಮಾನ್ಯತೆ ಮತ್ತು ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಪಡೆಯತಕ್ಕದ್ದು.
10. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ನಿಯಮಾನುಸಾರ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯವರ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.
11. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನು ಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.
12. ಅರ್ಹ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
13. ಪ್ರತಿವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
14. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಭಂದ 36-39 ರಂತೆ ನೋಂದಾಯಿಸಿದ ಎಲ್ಲಾ ಶಾಲೆಗಳು ಮಾನ್ಯತೆ ಹಾಗೂ ತಾತ್ಕಾಲಿಕ ಮಾನ್ಯತೆ ವ್ಯಾಪ್ತಿಗೆ ಬರುವುದು.
15. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
16. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳೊಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಂತಾನೆ ರದ್ದಾಗುವುದು.
17. ಶಾಲೆಯಲ್ಲಿ ನೇಮಕಗೊಂಡ ಸಿಬ್ಬಂದಿಯವರ ಸೇವಾ ಪುಸ್ತಕ ತೆರೆದು ಅದರಲ್ಲಿ ಅವರ ಸೇವಾ ವಿವರಗಳನ್ನು ನಿಯಮನುಸಾರ ಖಡ್ಡಾಯವಾಗಿ ದಾಖಲಿಸಿ ನಿರ್ವಹಿಸತಕ್ಕದ್ದು. ಹಾಗೂ ಸದರಿ ಸಿಬ್ಬಂದಿಗೆ ಕನಿಷ್ಠ ಮೂಲ ವೇತನವನ್ನು ಬ್ಯಾಂಕ್ ಮೂಲಕ ಪಾವತಿಸತಕ್ಕದ್ದು.
18. ಆಡಳಿತ ಮಂಡಳಿಯವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ಎಂದು ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದು ಪಡಿಸಲಾಗುವುದು.
19. ಈ ಶಾಲಾ ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ಕಡ್ಡಾಯವಾಗಿ ನಿಯೋಜಿಸುವುದು.
20. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ಒದಗಿಸುವುದು ಹಾಗೂ ಕುಡಿಯುವ ನೀರು ಸೌಲಭ್ಯ ನೀಡುವುದು.
21. ಕರ್ನಾಟಕ ಶಿಕ್ಷ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು.

22. ಕರ್ನಾಟಕ ಶಿಕ್ಷಣ ಸಂಸ್ಥೆಗಳು/ವರ್ಗೀಕರಣ ನಿಯಂತ್ರಣ ಇತ್ಯಾದಿ ನಿಯಮಾವಳೀಗಳು 1995. ದಿನಾಂಕ :- 4-10-96 ರ ನಿಯಮ 10 ರಂತೆ ಟರ್ಮ ಶುಲ್ಕ ಭೋದನಾ ಶುಲ್ಕ ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10/04 ರಂತೆ ಶಾಲೆಯಲ್ಲಿ ವಿದ್ಯಾರ್ಥಿ ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರ ಬ್ರೋಚರನ್ನು ಶಾಲೆಯ ಸೂಚನಾ ಫಲಕದಲ್ಲಿ ಖಡ್ಡಾಯವಾಗಿ ಪ್ರಕಟಿಸಿ ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ/ ಉಪ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
23. ಸರ್ಕಾರದ ಸುತೋಲೆ ಸಂ ಇಡಿ.27 ಎಸ್.ಇ.ಪಿ.03 ದಿ :-13-2-2006 ರ ಪ್ರಕಾರ ಎಲ್ಲಾ ಸಿಬ್ಬಂದಿಯವರ ಸೇವಾ ಪುಸ್ತಕಗಳನ್ನು ತೆರೆದು ನಿಯಮಾನುಸಾರ ದಾಖಲಿಸಲು ಕಡ್ಡಾಯವಾಗಿ ಸೂಚಿಸಿದೆ. ನೇಮಕಗೊಂಡ ಶಿಕ್ಷಕರಿಗೆ ಸೇವಾಭದ್ರತೆ ಒದಗಿಸುವುದು. ಬ್ಯಾಂಕ್ ಮೂಲಕ ವೇತನ ನೀಡುವುದು, ಕಡ್ಡಾಯವಾಗಿ ನಿರ್ವಹಿಸತಕ್ಕದ್ದು. ಆಡಳಿತ ಮಂಡಳಿಯು ನೌಕರರಿಗೆ ಸೇವಾ ಭದ್ರತೆ ಒದಗಿಸಿದ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಮಾನ್ಯತೆಯನ್ನು ನವೀಕರಿಸತಕ್ಕದ್ದು.
24. ಕಡ್ಡಾಯವಾಗಿ ಶಾಲೆಯಲ್ಲಿ ಅಗ್ನಿ ನಂದಕಗಳನ್ನು ಅಳವಡಿಸಿ ಈ ಕಛೇರಿಗೆ ವರದಿ ನೀಡುವುದು.
25. ಆರ್.ಟಿ.ಇ. ಕಾಯ್ದೆಯಡಿಯಲ್ಲಿ ಶಾಲೆಯಲ್ಲಿ ದಾಖಲಾದ ಎಲ್ಲ ಮಕ್ಕಳಿಗೆ ಉಚಿತ & ಕಡ್ಡಾಯ ಶಿಕ್ಷಣವನ್ನು ಒದಗಿಸುವುದು ಪ್ರತಿಯೊಂದು ಶಾಲೆಯ ಕರ್ತವ್ಯವಾಗಿದೆ. ಮೀಸಲಾತಿ ಮೂಲಕ ದಾಖಲು ಮಾಡಿಕೊಳ್ಳಲಾದ ಮಕ್ಕಳನ್ನು ಇತರೆ ಮಕ್ಕಳಿಂದ ಪ್ರತ್ಯೇಕಿಸಿ ತಾರತಮ್ಯ ಮಾಡಬಾರದು ನಿಯಮ 7 [11]. [ಸೆಕ್ಷನ್ 12ಎ] ಅವಕಾಶ ವಂಚಿತ ದುರ್ಬಲ ವರ್ಗದ ಮಕ್ಕಳಿಗೆ ಮೀಸಲಾದ ಕೋಟಾದಡಿಯಲ್ಲಿ ದಾಖಲಾದ ಮಕ್ಕಳಿಂದ ಯಾವುದೇ ರೀತಿಯ ಶುಲ್ಕವನ್ನು ವಸೂಲು ಮಾಡುವಂತಿಲ್ಲ ಸೆಕ್ಷನ್ 8 [1].
26. ಶಾಲೆಗೆ ಮಕ್ಕಳನ್ನು ದಾಖಲು ಮಾಡಿಕೊಳ್ಳುವಾಗ ಮಕ್ಕಳಿಂದ ಅಥವಾ ಪೋಷಕರಿಂದ ಯಾವುದೇ ರೀತಿಯ ದೇಣಿಗೆ [ಡೊನೇಶನ್] ಇತ್ಯಾದಿಗಳನ್ನು ಪಡೆಯುವಂತಿಲ್ಲ. ಹಾಗೂ ಮಗುವನ್ನು ಅಥವಾ ಪಾಲಕ/ಪೋಷಕರನ್ನು ಯಾವುದೇ ರೀತಿಯ ಪರೀಕ್ಷೆಗೆ ಒಳಪಡಿಸುವಂತಿಲ್ಲ. ಯಾವುದೇ ಶಾಲೆಯು ದೇಣಿಗೆ [ಕ್ಯಾಪಿಟೇಶನ್ ಶುಲ್ಕ]ಯನ್ನು ತೆಗೆದುಕೊಂಡಲ್ಲಿ ಪಡೆದುಕೊಂಡ ಹತ್ತು ಪಟ್ಟು ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದಾಗಿದೆ. ಸೆಕ್ಷನ್ 12 [2] ಎ. ಮಕ್ಕಳನ್ನು ಆಯ್ಕೆ ಪರೀಕ್ಷೆಗೆ ಒಳಪಡಿಸುವಂತಿಲ್ಲ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಶಾಲೆಯ ವಿರುದ್ಧ ಮೊದಲನೆ ಬಾರಿ 25 ಸಾವಿರ ರೂಗಳ ವರೆಗೆ ದಂಡವನ್ನು ವಿಧಿಸಬಹುದು. ತದನಂತರ ಕಾನೂನು ಉಲ್ಲಂಘನೆ ಮಾಡಿದಲ್ಲಿ ಪ್ರತಿಬಾರಿ 50 ಸಾವಿರ ರೂಗಳದಂಡನೆಯನ್ನು ವಿಧಿಸ ಬಹುದಾಗಿದೆ. ಸೆಕ್ಷನ್ 12 [2[ಬಿ]
27. ವಯಸ್ಸಿನ ದಾಖಲೆ ಇಲ್ಲದ ಕಾರಣಕ್ಕಾಗಿ ಯವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸುವಂತಿಲ್ಲ ಸೆಕ್ಷನ್ 14 [2]
28. ಶಾಲೆಯಲ್ಲಿ ದಾಖಲಾದ ಯಾವುದೇ ಮಗುವನ್ನು ಎಲೆಮಂಟರಿ ಶಿಕ್ಷಣ ಮುಗಿಯುವವರೆಗೆ ಯಾವುದೇ ಕಾರಣಕ್ಕಾಗಿ ಶಾಲೆಯಿಂದ ಹಿಂದೆಗೆಯುವುದಾಗಲಿ ಅಥವಾ ಹೊರ ಹಾಕುವುದಾಗಲಿ ಮಾಡುವಂತಿಲ್ಲ ಸೆಕ್ಷನ್ [16]
29. ಯಾವುದೇ ಮಗುವಿಗೆ ದೈಹಿಕ/ಮಾನಸಿಕ ಹಿಂಸೆಯನ್ನು ನೀಡುವಂತಿಲ್ಲ ಸೆಕ್ಷನ್ 17 [1] ಉಲ್ಲಂಘಿಸಿದವರ ವಿರುದ್ಧ ಸೇವಾ ನಿಯಮಗಳಡಿಯಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು. ಸೆಕ್ಷನ್ 17 [2]

ಉಪ ನಿರ್ದೇಶಕರು [ಆಡಳಿತ]
ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ.

ಸ್ಥಳ :-ಬಳ್ಳಾರಿ
ದಿ :- 15-3-2015

**ಗೆ,**

ಅಧ್ಯಕ್ಷರು/ಸಂಚಾಲಕರು ಮೌಂಟ್ ಕಾರ್ಮೆಲ್ ಶಿಕ್ಷಣ ಸಂಸ್ಥೆ [ರಿ] ತಾ:ಹೂವಿನ ಹಡಗಲಿ ಜಿ : ಬಳ್ಳಾರಿ ಇವರ ಮಾಹಿತಿಗಾಗಿ.

**ಪ್ರತಿಯನ್ನು:**

ಕ್ಷೇತ್ರ ಶಿಕ್ಷಣಾಧಿಕಾರಿಗಳು :- ಹೂವಿನ ಹಡಗಲಿ ಇವರ ಮಾಹಿತಿಗಾಗಿ.